ಪರಿವರ್ತಿಸಲು ಮೇಲೆ ತಿಳಿಸಿದಂತೆ ಕಾಯ್ದೆಯನ್ವಯ ಅವಕಾಶವಿರುವುದಿಲ್ಲ.

ಆ) **ಮತ್ತು** ಇ) ಮೇಲಿನ ಉಪ ಪ್ರಶ್ನೆಯ ಉತ್ತರದಲ್ಲಿ ವಿವರಿಸಿದಂತೆ ತುರುವೇಕೆರೆ ಪಟ್ಟಣ ಪಂಚಾಯತನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿರುವುದಿಲ್ಲ.

ಪಟ್ಟಣ ಪಂಚಾಯಿತಿ ರಚನೆ

1887(1181); ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಮ್ಮಸಂದ್ರ ಗ್ರಾಮ ಹಾಗೂ ದಂಡಿನಶಿವರ ಗ್ರಾಮಗಳಲ್ಲಿ ಜನಸಂಖ್ಯೆಯ ಅಂದಾಜು 14000 ದಾಟಿದ್ದು, ಈ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯಾಗಿ ಮಾಡಲು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಇಲ್ಲ. ಕರ್ನಾಟಕ ಪುರಸಭೆಗಳ ಕಾಯ್ದೆ 1964 ಕಲಂ 349 ರನ್ವಯ ಯಾವುದೇ ಪ್ರದೇಶಕ್ಕೆ ಪಟ್ಟಣ ಪಂಚಾಯತನ್ನು ಸ್ಥಾಪಿಸಲು ಅಂತಹ ಪ್ರದೇಶದ ಜನಸಂಖ್ಯೆ 10000 ಕ್ಕಿಂತ ಅಧಿಕ ಹಾಗೂ 20000 ಮೀರದಂತೆ ಇರಬೇಕು. 2011 ರ ಜನಗಣತಿಯಂತೆ ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಮ್ಮಸಂದ್ರ ಗ್ರಾಮ ಹಾಗೂ ದಂಡಿನಶಿವರ ಗ್ರಾಮದ ಜನಸಂಖ್ಯೆ 10000 ಕ್ಕಿಂತ ಕಡಿಮೆ ಇರುತ್ತದೆ. ಆದುದರಿಂದ ಸದರಿ ಗ್ರಾಮಗಳಿಗೆ ಪಟ್ಟಣ ಪಂಚಾಯತ ಸ್ಥಾಪಿಸಲು ಅವಕಾಶವಿರುವುದಿಲ್ಲ.

ಆ) ಮೇಲಿನ ಉಪ ಪ್ರಶ್ನೆಯ ಉತ್ತರದಲ್ಲಿ ವಿವರಿಸಿದಂತೆ ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಮ್ಮಸಂದ್ರ ಗ್ರಾಮ ಹಾಗೂ ದಂಡಿನಶಿವರ ಗ್ರಾಮಗಳಿಗೆ ಪಟ್ಟಣ ಪಂಚಾಯತ ಸ್ಥಾಪಿಸಲು ಅರ್ಹವಿರುವುದಿಲ್ಲ.

ಹೊಸ ಸ್ಟೇಷನ್‌ಗಳ ಮಂಜೂರಾತಿ

1888(1389); ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) ತುರುವೇಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಶೆಟ್ಟಗೊಂಡನಹಳ್ಳಿ ಗ್ರಾಮ, ಬಾಣಸಂದ್ರ ಮತ್ತು ಸೀಗೆಹಳ್ಳಿಯಲ್ಲಿ ಹೊಸ ಸ್ಟೇಷನ್, ಎಂ.ಎಸ್.ಎಸ್. ಮಂಜೂರು ಮಾಡಲು ಕೋರಲಾಗಿದ್ದು, ಸರ್ಕಾರವು ಈವರೆಗೂ ಹೊಸ ಸ್ಟೇಷನ್ ಮಂಜೂರು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಹೊಸದಾಗಿ ಸ್ಟೇಷನ್ ಮಂಜೂರು ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) **ಮತ್ತು ಆ)** ತುರುವೇಕೆರೆ ತಾಲ್ಲೂಕಿನ ಶೆಟ್ಟಿಗೊಂಡನ ಹಳ್ಳಿಯಲ್ಲಿ ಹೊಸ ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದ್ದು ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನ ಸೀಗೆಹಳ್ಳಿ ಗ್ರಾಮಕ್ಕೆ ಪ್ರಸ್ತುತ 110/11 ಕೆ.ವಿ ಉಂಗ್ರ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸೀಗೆಹಳ್ಳಿ ಗ್ರಾಮವು 110/11 ಕೆ.ವಿ ಉಂಗ್ರ ವಿದ್ಯುತ್ ಉಪಕೇಂದ್ರದಿಂದ ಕೇವಲ 9 ಕಿ.ಮೀ ಅಂತರದಲ್ಲಿದ್ದು, ಸೀಗೆಹಳ್ಳಿ ಗ್ರಾಮದಲ್ಲಿ ಹೊಸ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಪ್ರಸ್ತಾವನೆ ಇರುವುದಿಲ್ಲ.